Con... P&G Trust
Date
157 22 APR 2011
C
DC
AO
AAO

M. D.
21 APR 2011
KPTCL

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ಸರ್ಕಾರಿ ನೌಕರರು ಸೇವೆಯಲ್ಲಿದ್ದಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬಗಳಿಗೆ ನೀಡಬಹುದಾದ ಇಡಿಗಂಟಿನ ಪರಿಹಾರ ನೀಡುವ ಬಗ್ಗೆ.

Dir (Fin)

ಓದಲಾಗಿದೆ: 1.ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010
2.ಮಹಾಲೇಖಪಾಲರ ಪತ್ರ ಸಂಖ್ಯೆ: PM/GI/F-11/579: ದಿನಾಂಕ:28-12-2010

### ಪ್ರಸ್ತಾವನೆ:

ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ಸರ್ಕಾರಿ ಅಧಿಕಾರಿ/ನೌಕರರನು ಸೇವೆಯಲ್ಲಿರುವಾಗ ಮರಣಹೊಂದಿದ ಸಂದರ್ಭದಲ್ಲಿ ಕಚೇರಿ ಮುಖ್ಯಸ್ಥನು, ಅವಶ್ಯ ದಸ್ತಾವೇಜುಗಳನ್ನು ಸ್ವೀಕರಿಸಿ,ಇಲಾಖಾ ಮುಖ್ಯಸ್ಥರಿಗೆ ಕಳುಹಿಸಬೇಕೆಂದು ಅದನ್ನು ಪರಿಶೀಲಿಸಿ ನಂತರ, ಪರಿಹಾರವನ್ನು ಇಲಾಖಾ ಮುಖ್ಯಸ್ಥರು ಮಂಜೂರು ಮಾಡುವುದೆಂದು ಮತ್ತು ಅದರ ಆಧಾರದ ಮೇಲೆ ಮಹಾಲೇಖಪಾಲರು ಪರಿಹಾರವನ್ನು ಅಧಿಕರಿಸುವರೆಂದು (will authorize) ಮೇಲೆ ಓದಲಾದ ಕ್ರ.ಸಂಖ್ಯೆ:1 ರಲ್ಲಿನ ದಿ: 12-10-2010 ರ ಆದೇಶದಲ್ಲಿ ಸೂಚಿಸಲಾಗಿದೆ.

JDCPS F/K

ಹೊಸ ಪಿಂಚಣಿ ಯೋಜನೆ ಜಾರಿಗೆ ಬಂದ ನಂತರ Central Record Keeping Agency ಯನ್ನು ನೇಮಿಸಿರುವುದರಿಂದ, ಈ ಪಕ್ರಿಯೆಯಲ್ಲಿ ಮಹಾಲೇಖಪಾಲರ ಪಾತ್ರವೇನು ಇರುವುದಿಲ್ಲವೆಂದು ತಿಳಿಸಿ, ಈ ಅಧಿಕಾರವನ್ನು ಬೇರೆಯವರಿಗೆ ವಹಿಸಿ ಆದೇಶ ಹೊರಡಿಸುವಂತೆ ಮಹಾಲೇಖಪಾಲರು ಮೇಲೆ ಓದಲಾದ ಕ್ರಮಸಂಖ್ಯೆ: 2 ರ ಪತ್ರದಲ್ಲಿ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ ಸರ್ಕಾರವು ಪರಿಶೀಲಿಸಿ, ಈ ಕೆಳ ಕಂಡಂತೆ ಆದೇಶ ಹೊರಡಿಸಲಾಗಿದೆ.

### ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ಬೆಂಗಳೂರು,ದಿನಾಂಕ:15.4.2011

ಈ ಯೋಜನೆಯಡಿಯಲ್ಲಿ ಪರಿಹಾರವನ್ನು ಮಂಜೂರು ಮಾಡುವ ಹಾಗೂ ಅಧಿಕರಿಸಲು ಅನುಸರಿಸಬೇಕಾದ ವಿಧಿವಿಧಾನಗಳು ಕೆಳಕಂಡಂತೆ ಇರತಕ್ಕದೆಂದು ಆದೇಶಿಸಿದೆ.

(APA) / C (P&GT) / PS 35

(i) ಹೊಸ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆಯ ವ್ಯಾಪ್ತಿಗೆ ಬರುವ ಗ್ರೂಪ್ ಡಿ , ಸಿ ಮತ್ತು ಗ್ರೂಪ್ ಬಿ ಶ್ರೇಣಿಯ ಸರ್ಕಾರಿ ನೌಕರರು/ ಅಧಿಕಾರಿಯು ಸೇವೆಯಲ್ಲಿರುವಾಗ ಮರಣ ಹೊಂದಿದ ವಿಷಯವು ತಲುಪಿದ ನಂತರ, ಕಚೇರಿ ಮುಖ್ಯಸ್ಥನು, ಮೃತ ಸರ್ಕಾರಿ ನೌಕರನ ಕುಟುಂಬಕ್ಕೆ ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010 ರ ಆದೇಶದ ನಮೂನೆ-ಎ ಯಲ್ಲಿ ಸೂಚಿಸಿರುವ ಮಾಹಿತಿ/ದಾಖಲೆಗಳನ್ನು ಕಳುಹಿಸುವಂತೆ ಕೋರಿ ಪತ್ರವನ್ನು ಕಳುಹಿಸಬೇಕು. ಅದರಲ್ಲಿ ನಮೂದಿಸಿರುವ ಅವಶ್ಯ ದಸ್ತಾವೇಜುಗಳನ್ನು ಸ್ವೀಕರಿಸಿದ ನಂತರ, ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010 ರ ಕಂಡಿಕೆ 5 ರನ್ವಯ ಪರಿಶೀಲಿಸಿ, ವಾಸ್ತವವಾಗಿ ಸಲ್ಲಿಸಿರುವ ಅರ್ಹದಾಯಕ ಸೇವೆಯನ್ನು ನೌಕರನ ಸೇವಾ ಪುಸ್ತಕ/ಸೇವಾ ದಾಖಲೆಗಳ ಮೂಲಕ ಖಚಿತಪಡಿಸಿಕೊಂಡ ನಂತರ, ಪರಿಹಾರವನ್ನು ನಮೂದಿಸಿ, ಇಲಾಖಾ ಮುಖ್ಯಸ್ಥರಿಗೆ ದಾಖಲೆಗಳನ್ನು ಕಳುಹಿಸಬೇಕು. ಇಲಾಖೆಯ ಮುಖ್ಯಸ್ಥರುಗಳು ಮತ್ತೊಮ್ಮೆ, ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010 ಅಧಿಕಾರಿ/ನೌಕರರು ರ ಕಂಡಿಕೆ 5 ರನ್ವಯ ಪರಿಶೀಲಿಸಿ, ವಾಸ್ತವವಾಗಿ ಸಲ್ಲಿಸಿರುವ ಅರ್ಹದಾಯಕ ಸೇವೆಯನ್ನು ದಾಖಲೆಗಳ ಮೂಲಕ ಖಚಿತಪಡಿಸಿಕೊಂಡು , ಮೃತ ನೌಕರರಿಂದ ಸರ್ಕಾರಕ್ಕೆ ಉಂಟಾದ ನಷ್ಟದ ಮೊಬಲಗು ಹಾಗೂ ಅವರಿಂದ ಬರಬೇಕಾದ ಬಾಕಿ ಮತ್ತು ಇತರೇ ಮುಂಗಡಗಳ ಬಾಕಿ ಮೊಬಲಗನ್ನು ಪರಿಹಾರ ಮೊತ್ತದಲ್ಲಿ ಹೊಂದಾಣಿಕೆ ಮಾಡಿಕೊಂಡು ಉಳಿದ ಮೊಬಲಗನ್ನು **ನಮೂನೆ-ಬಿ** ಯಲ್ಲಿರುವಂತೆ ಪರಿಹಾರವನ್ನು ಮಂಜೂರು ಮಾಡಿ ಪರಿಹಾರವನ್ನು ಅಧಿಕರಿಸಬೇಕು (will authorize) . ಹೀಗೆ ಅಧಿಕರಿಸಿದ ಮೊಬಲಗನ್ನು ಏಕಗಂಟಿನಲ್ಲಿ ಸಂಬಂಧಪಟ್ಟ ಖಜಾನೆ ಮೂಲಕ ಸಂದಾಯ ಮಾಡತಕ್ಕದ್ದು.

(ii) ಇನ್ನು,ಗ್ರೂಪ್ ಎ ಶ್ರೇಣಿಯ ಸರ್ಕಾರಿ ನೌಕರರಿಗೆ ಸಂಬಂದಿಸಿದಂತೆ ಆಯಾ ಇಲಾಖೆಯ ಮುಖ್ಯಸ್ಥರುಗಳು ಮೃತ ಸರ್ಕಾರಿ ನೌಕರನ ಕುಟುಂಬಕ್ಕೆ ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010 ರ ಆದೇಶದ ನಮೂನೆ-ಎ ಯಲ್ಲಿ ಸೂಚಿಸಿರುವ ಮಾಹಿತಿ/ದಾಖಲೆಗಳನ್ನು ಕಳುಹಿಸುವಂತೆ ಕೋರಿ ಪತ್ರವನ್ನು ಕಳುಹಿಸಬೇಕು ಮತ್ತು ಅದರಲ್ಲಿ ನಮೂದಿಸಿರುವ ಅವಶ್ಯ ದಸ್ತಾವೇಜುಗಳನ್ನು ಸ್ವೀಕರಿಸಿದ ನಂತರ, ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010 ರ ಕಂಡಿಕೆ 5 ರನ್ವಯ ಪರಿಶೀಲಿಸಿ, ವಾಸ್ತವವಾಗಿ ಸಲ್ಲಿಸಿರುವ ಅರ್ಹದಾಯಕ ಸೇವೆಯನ್ನು

ನೌಕರನ ಸೇವಾ ಪುಸ್ತಕ/ಸೇವಾ ದಾಖಲೆಗಳ ಮೂಲಕ ಖಚಿತಪಡಿಸಿಕೊಂಡ ನಂತರ, ನಮೂನೆ-ಬಿ ಯಲ್ಲಿರುವಂತೆ ಪರಿಹಾರವನ್ನು ನಮೂದಿಸಿ, ಆಯಾ ಸಚಿವಾಲಯದ ಇಲಾಖಾ ಕಾರ್ಯದರ್ಶಿಗಳಿಗೆ ದಾಖಲೆಗಳನ್ನು ಕಳುಹಿಸಬೇಕು. ಇಲಾಖಾ ಕಾರ್ಯದರ್ಶಿಗಳು ಸರ್ಕಾರಿ ಆದೇಶ ಸಂಖ್ಯೆ:ಆಇ 03 ಸೇನಿಸೇ 2010, ದಿನಾಂಕ:12.10.2010 ಅಧಿಕಾರಿ/ನೌಕರರು ರ ಕಂಡಿಕೆ 5 ರನ್ವಯ ಪರಿಶೀಲಿಸಿ, ವಾಸ್ತವವಾಗಿ ಸಲ್ಲಿಸಿರುವ ಅರ್ಹದಾಯಕ ಸೇವೆಯನ್ನು ದಾಖಲೆಗಳ ಮೂಲಕ ಖಚಿತಪಡಿಸಿಕೊಂಡು, ಮೃತ ನೌಕರರಿಂದ ಸರ್ಕಾರಕ್ಕೆ ಉಂಟಾದ ನಷ್ಟದ ಮೊಬಲಗು ಹಾಗೂ ಅವರಿಂದ ಬರಬೇಕಾದ ಬಾಕಿ ಮತ್ತು ಇತರೇ ಮುಂಗಡಗಳ ಬಾಕಿ ಮೊಬಲಗನ್ನು ಪರಿಹಾರ ಮೊತ್ತದಲ್ಲಿ ಹೊಂದಾಣಿಕೆ ಮಾಡಿಕೊಂಡು ಉಳಿದ ಪರಿಹಾರವನ್ನು **ನಮೂನೆ-ಬಿ** ಯಲ್ಲಿರುವಂತೆ ಪರಿಹಾರವನ್ನು ಮಂಜೂರು ಮಾಡಿ ಅಧಿಕರಿಸಬೇಕು (will authorize). ಹೀಗೆ ಅಧಿಕರಿಸಿದ ಮೊಬಲಗನ್ನು ಏಕಗಂಟಿನಲ್ಲಿ ಸಂಬಂಧಪಟ್ಟ ಖಜಾನೆ ಮೂಲಕ ಸಂದಾಯ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

15/4/11
(ಪಿ.ನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-1).
ದೂರವಾಣಿ ಸಂಖ್ಯೆ: 22033135

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 100 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ.
2. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು/ವಿಶೇಷ ಕಾರ್ಯದರ್ಶಿಗಳು ಅಪರ ಕಾರ್ಯದರ್ಶಿಗಳು/ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳಿಗೆ ಹಾಗೂ ಅಧೀನ ಕಾರ್ಯದರ್ಶಿಗಳಿಗೆ.
3. ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

37

4. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ.
5. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
6. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
7. ಮಹಾಲೇಖಪಾಲರು (ಲೆಕ್ಕಪತ್ರ:ಲೆಕ್ಕ ಪರಿಶೋಧನೆ: ಜಿ.ಎಂ.ಶಾಖೆ),ಕರ್ನಾಟಕ, ಬೆಂಗಳೂರು.
8. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
9. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
10. ರಿಜಿಸ್ಟ್ರಾರ್, ಕರ್ನಾಟಕ ಲೋಕಯುಕ್ತ, ಬೆಂಗಳೂರು.
11. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತು, ಬೆಂಗಳೂರು.
13. ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು.
14. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
15. ಅಧ್ಯಕ್ಷರು,ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು
16. ಕರ್ನಾಟಕ ಸರ್ಕಾರಿ ಸಚಿವಾಲಯದ ಎಲ್ಲಾ ಶಾಖೆಗಳು.
17. ಕರ್ನಾಟಕ ಸರ್ಕಾರಿ ಸಚಿವಾಲಯ ಗ್ರಂಥಾಲಯ; ವಿಧಾನ ಮಂಡಲ ಗ್ರಂಥಾಲಯ
18. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ (ಎಲ್ಲಾ ಜಿಲ್ಲಾ ಖಜಾನೆಗಳು).
19. ವಾರಪತ್ರ.

[ಕ್ರಮ ಸಂಖ್ಯೆ:7 ರಿಂದ 13 ರವರೆಗೆ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ].

ಕರ್ನಾಟಕ ಸರ್ಕಾರದ ಅಧಿಕೃತ ಅಂತರ್ಜಾಲ ತಾಣ www.finance.kar.nic.in ವೀಕ್ಷಿಸಿ.